**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 75 ಗ್ರಾಪಸ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:04-02-2019.

## ಸುತ್ತೋಲೆ

ವಿಷಯ: 14ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಹೆಚ್ಚುವರಿ ಮಾರ್ಗಸೂಚಿಗಳ ಕುರಿತು.

ಉಲ್ಲೇಖ:
1. ಭಾರತ ಸರ್ಕಾರದ ಪತ್ರ ಸಂಖ್ಯೆ: 13(32), ಎಫ್‌ಎಫ್‌ಸಿ/ಎಫ್‌ಸಿಡಿ/2015-16, ದಿನಾಂಕ:08-10-2015.
2. ಸರ್ಕಾರದ ಸಮ ಸಂಖ್ಯೆಯ ಸುತ್ತೋಲೆಗಳ ದಿನಾಂಕ:03-02-2018.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರ ಅಧ್ಯಕ್ಷತೆಯಲ್ಲಿ ದಿನಾಂಕ:20-11-2018ರಂದು ನಡೆದ PRIASoft ಮತ್ತು PFMS ತಂತ್ರಾಂಶಗಳ ಸಂಯೋಜನೆ ವಿಷಯವಾಗಿ ನಡೆದ ಸಭಾ ನಡವಳಿಗಳು.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 440 ಜಿಪಸ 2018, ದಿನಾಂಕ: 17-12-2018.

*****

ಉಲ್ಲೇಖ(2)ರ ರಾಜ್ಯ ಸರ್ಕಾರದ ಸುತ್ತೋಲೆಯಲ್ಲಿ 14ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ. ಉಲ್ಲೇಖ(3)ರ ಸಭಾ ನಡವಳಿಗಳ ತೀರ್ಮಾನಗಳನ್ವಯ ಈ ಕೆಳಕಂಡ ಹೆಚ್ಚುವರಿ ಮಾರ್ಗಸೂಚಿಗಳಂತೆ ಅನುದಾನವನ್ನು ವಿನಿಯೋಗಿಸಬಹುದಾಗಿದೆ.

1. ಪ್ರಸ್ತುತ, 14ನೇ ಹಣಕಾಸು ಆಯೋಗದಡಿ ಎಲ್ಲಾ ಕಂತುಗಳ ಅನುದಾನವನ್ನು 75:25ರ ಅನುಪಾತದಲ್ಲಿ ಬಿಡುಗಡೆಗೊಳಿಸುತ್ತಿರುವ ಕಾರ್ಯವಿಧಾನವನ್ನು ಕೈಬಿಟ್ಟು, ಸಂಪೂರ್ಣ ಅನುದಾನವನ್ನು PFMS ತಂತ್ರಾಂಶದಲ್ಲಿ ನೋಂದಾಯಿತ 14ನೇ ಹಣಕಾಸು ಆಯೋಗ ಅನುದಾನದ ಉಳಿತಾಯ ಖಾತೆಗಳಿಗೆ ಬಿಡುಗಡೆಗೊಳಿಸಲಾಗುವುದು.
2. ಸದರಿ ಬಿಡುಗಡೆಗೊಳಿಸಲಾದ ಅನುದಾನದಲ್ಲಿ ಬಾಕಿ ಉಳಿದಿರುವ ವಿದ್ಯುತ್ ಬಿಲ್ಲಿನ ಪಾವತಿಯನ್ನು ಗ್ರಾಮ ಪಂಚಾಯತಿಯವರು ವಿದ್ಯುತ್ ಮಂಡಳಿಯವರಿಗೆ PFMS ತಂತ್ರಾಂಶದ ಮೂಲಕ ಕಡ್ಡಾಯವಾಗಿ ಪಾವತಿ ಮಾಡಲು ಕ್ರಮವಹಿಸುವುದು. ವಿದ್ಯುತ್ ಬಿಲ್ಲು ಪಾವತಿ ಮಾಡಿರುವುದನ್ನು ಆಯಾ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಆಯಾ ಮುಖ್ಯ ಲೆಕ್ಕಾಧಿಕಾರಿಗಳು ದೃಢೀಕರಿಸಿ, ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿ ಅನುದಾನ ಬಿಡುಗಡೆಗೊಂಡ ನಂತರ ವರದಿಯನ್ನು ಸಲ್ಲಿಸುವುದು.
3. ಗ್ರಾಮ ಪಂಚಾಯತಿಗಳು ಸಂಬಂಧಿಸಿದ ವಿದ್ಯುತ್ ಮಂಡಳಿಯವರಿಗೆ PFMS ತಂತ್ರಾಂಶದ ಮೂಲಕ ಪಾವತಿ ಮಾಡಲು PRIASoft ತಂತ್ರಾಂಶದಲ್ಲಿ ಕಡ್ಡಾಯವಾಗಿ ವಿದ್ಯುತ್ ಮಂಡಳಿಯವರನ್ನು ವೆಂಡರ್‌ಗಳನ್ನಾಗಿ ನೋಂದಣಿ ಮಾಡುವುದು.
4. ಆಯಾ ಗ್ರಾಮ ಪಂಚಾಯತಿಗಳು 14ನೇ ಹಣಕಾಸು ಆಯೋಗ ಅನುದಾನದ ಕ್ರಿಯಾಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿ ಬಾಕಿ ಉಳಿದಿರುವ ವಿದ್ಯುತ್ ಬಿಲ್ಲಿನ ಮೊತ್ತವನ್ನು ಸೇರಿಸಿ, ಕ್ರಿಯಾಯೋಜನೆಯನ್ನು ತಯಾರಿಸುವುದು ಹಾಗೂ ಸದರಿ ಕ್ರಿಯಾಯೋಜನೆಯನ್ನು ಅನುಮೋದಿಸುವ ಪೂರ್ವದಲ್ಲಿ ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಿಯಾಯೋಜನೆಯಲ್ಲಿ ಬಾಕಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಸೇರಿಸಿರುವುದರ ಬಗ್ಗೆ ದೃಢೀಕರಿಸಿ ಅನುಮೋದಿಸುವುದು.
5. 14ನೇ ಹಣಕಾಸು ಆಯೋಗ ಅನುದಾನದ ಮೇಲ್ವಿಚಾರಣೆಗಾಗಿ ಬಳಸಲಾಗುತ್ತಿದ್ದ ಪಂಚತಂತ್ರ ತಂತ್ರಾಂಶದ ಬಳಕೆಯನ್ನು 2018-19ನೇ ಸಾಲಿನಿಂದ ಕೈಬಿಡಲಾಗಿದೆ.
6. ಉಲ್ಲೇಖ(4)ರ ಸುತ್ತೋಲೆಯಲ್ಲಿ ಆದೇಶಿಸಿದಂತೆ ದಿನಾಂಕ:17-12-2018ರಿಂದ 2018-19ನೇ ಸಾಲಿನ 14ನೇ ಹಣಕಾಸು ಆಯೋಗ ಅನುದಾನದ ಮೇಲ್ವಿಚಾರಣೆಗೆ PRIASoft ತಂತ್ರಾಂಶವನ್ನು

ಬಳಸುವುದು ಹಾಗೂ ಅನುದಾನದ ವೆಚ್ಚ ಮತ್ತು ಪಾವತಿಗಳನ್ನು ಕಡ್ಡಾಯವಾಗಿ PFMS ತಂತ್ರಾಂಶದ ಮೂಲಕವೇ ಮಾಡುವುದು.

7. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಬಳಸಲಾಗುತ್ತಿರುವ Digital Signature Certificate (DSC) ಗಳನ್ನೇ PFMS ಹಾಗೂ PRIASoft ತಂತ್ರಾಂಶದಲ್ಲಿ 14ನೇ ಹಣಕಾಸು ಆಯೋಗ ಅನುದಾನದ ವೆಚ್ಚವನ್ನು ಭರಿಸಲು ಬಳಸುವುದು.
8. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 14ನೇ ಹಣಕಾಸು ಆಯೋಗದಡಿ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ಸೇರಿದಂತೆ ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಒಟ್ಟುಗೂಡಿಸಿ, ಕಡ್ಡಾಯವಾಗಿ "ನಮ್ಮ ಗ್ರಾಮ ನಮ್ಮ ಯೋಜನೆ" (GPDP) ಕ್ರಿಯಾಯೋಜನೆಯನ್ನು ತಯಾರಿಸುವುದು. ತದನಂತರ, 14ನೇ ಹಣಕಾಸು ಆಯೋಗದಡಿ ಸರ್ಕಾರದಿಂದ ಬಿಡುಗಡೆಯಾಗುವ 2ನೇ ಕಂತಿನ ಸಾಮಾನ್ಯ ಮೂಲ ಅನುದಾನ ಹಾಗೂ ಕಾರ್ಯಕ್ಷಮತೆ ಅನುದಾನಗಳ ಮೊತ್ತಕ್ಕೆ ಮಿತಿಗೊಳಿಸಿ, ಪೂರಕ (Supplementary) ಕ್ರಿಯಾಯೋಜನೆಯನ್ನು ತಯಾರಿಸುವುದು.
9. ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಿಗೆ ಒಂದೇ ಸಮಗ್ರ "ನಮ್ಮ ಗ್ರಾಮ ನಮ್ಮ ಯೋಜನೆ" ಕ್ರಿಯಾಯೋಜನೆಯನ್ನು ತಯಾರಿಸಿ, PlanPlus ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.
10. 14ನೇ ಹಣಕಾಸು ಆಯೋಗ ಅನುದಾನ ಕಾಮಗಾರಿಗಳ ಆರ್ಥಿಕ ಪ್ರಗತಿಯನ್ನು PRIASoft ತಂತ್ರಾಂಶದಲ್ಲಿ ಹಾಗೂ ಭೌತಿಕ ಪ್ರಗತಿಯನ್ನು ActionSoft ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿ, ಸದರಿ ಕಾಮಗಾರಿಗಳನ್ನು mActionSoft ಮೊಬೈಲ್ ಆಪ್‌ನಲ್ಲಿ Geotag ಮಾಡುವುದು.

ಉಲ್ಲೇಖ(2)ರ ಸುತ್ತೋಲೆಯಲ್ಲಿ ತಿಳಿಸಿರುವ ಯಾವುದೇ ಮಾರ್ಗಸೂಚಿಗಳನ್ನು ಕೈಬಿಟ್ಟಿರುವುದಿಲ್ಲ. ಅದರ ಜೊತೆ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಹೆಚ್ಚುವರಿ ಮಾರ್ಗಸೂಚಿಗಳನ್ನು ಸೇರಿಸಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್‌ಡಿ 04 ಎಫ್‌ಸಿಸಿ, ದಿನಾಂಕ:31-01-2019ರ ಸಹಮತಿಯನ್ವಯ ಹೊರಡಿಸಲಾಗಿರುತ್ತದೆ.

(ಎಸ್.ಎಂ.ಜುಲ್ಫಿಖಾರ್‌ಉಲ್ಲಾ)
ನಿರ್ದೇಶಕರು (ಪಂ.ರಾಜ್-2)ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು.
3. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
3. ನಿರ್ದೇಶಕರು (ಪಂ.ರಾಜ್-1 ಮತ್ತು 2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
4. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.